ಮಾಡುತ್ತಿದ್ದಾನೆ? ಎಂಬುದೇನನ್ನೂ ತಿಳಿದುಕೊಳ್ಳಲು ಬಯಸದ ಇಂತಹ ವ್ಯಕ್ತಿಯ ಜೊತೆಗೆ ತಾನು ಕುಳಿತಿದ್ದೇನೆ' ಎಂದು.

ಸಮುದ್ರದ ನೀರಿನಲ್ಲಿ ಬೀಳುತ್ತಿರುವ ಮಳೆಯ ಹನಿಗಳು ಅದೆಷ್ಟು ಚೆನ್ನಾಗಿ ಕಾಣುತ್ತಿವೆ! ಆತ ಹೇಳಿದ.

'ಹ್ಞಾ...'

ಸ್ವಲ್ಪಹೊತ್ತು ಇಬ್ಬರೂ ಮೌನವಹಿಸಿದರು.

'ಪ್ರಶಾಂತ ಮಹಾಸಾಗರದಲ್ಲಿ ಯಾವಾಗ ಹಡಗು ಬರುತ್ತೋ ಆಗ ಅದರ ಮುಂಭಾಗದಲ್ಲಿ ಸೀಳುವ ನೀರು ಬೆಳ್ಳಿಯಂತೆ ಹೊಳೆಯಹತ್ತುತ್ತದೆ' ಅತಿಥಿ ಹೇಳಿದ.

'ಯಾಕೆ?'

'ಬಹುಶಃ ಫೋಸ್ ಫೋರೆಸಂಸ್ ಕಾರಣವಿರಬಹುದು. ನೀವು ಯಾವತ್ತೂ ನೋಡಿಲ್ಲವೆ?

'ಇಲ್ಲ...'

'ಅವಕಾಶ ದೊರೆತರೆ ನೋಡುವಿರಂತೆ..'

'ನೀವು ತುಂಬಾ ತಿರುಗಿದ್ದೀರಾ? ಆಕೆ ಕೊಂಚ ಈರ್ಷ್ಯೆಯಿಂದೆಂಬಂತೆ ಕೇಳಿದಳು...

'ತುಂಬ, ತುಂಬ' ನೆನಪುಮಾಡಿಕೊಂಡು ಆತ ನಗುತ್ತಲಿದ್ದ.

'ಯಾವ ಜಾಗ ಎಲ್ಲಕ್ಕಿಂತ ಹೆಚ್ಚು ಪಸಂದ್ ಅನಿಸಿತು?

'ಯಾವಾಗ ಎಲ್ಲಿ ಅನಿಸಿತೋ...' ಆತ ಕಸಿವಿಸಿಗೊಳ್ಳುತ್ತ ನಕ್ಕ. ಅವಳಿಗೆ ತಿಳಿಯಿತೊ ಇಲ್ಲವೊ ಗೊತ್ತಿಲ್ಲ.

ಅವಳು ಸ್ವೀಕಾರಭಾವದಿಂದ ತಲೆಯಲ್ಲಾಡಿಸಿದಳು.

ಅವಳು ನೊಡಿದಳು ಕಾಫಿ ಖಾಲಿಯಾಗುತ್ತಿತ್ತು. ಮತ್ತು ವೇಟರ್ ಬಿಲ್ ತರುತ್ತಿದ್ದ. ಹೊರಗೆ ಮಳೆ ನಿಂತಿತ್ತು... ಮಬ್ಬು ಸಹ ಹರಿಯತೊಡಗಿತ್ತು. ಇಲ್ಲ, ಇನ್ನು ಜಡಿಮಳೆ ಹೊಯ್ಯುವುದಿಲ್ಲ. ಅಂತಹ ಸಂಕೇತ ಸುಳ್ಳಾಯಿತು. ಈಗ ಮಬ್ಬು ಹರಿಯುತ್ತೆ ಮತ್ತು ಪ್ರಕಾಶಮಾನ ಸೂರ್ಯ ಹೊರಬರುತ್ತಾನೆ.

ಬಿಲ್ ಬಂದೊಡನೆ ಆಕೆ ಎತ್ತಿಕೊಂಡಳು ಮತ್ತು

